(೨) ಲೋಕೋಪಯೋಗಿ ಇಲಾಖೆಯವರು ತಯಾರಿಸಿದ, ಅಂದಾಜು ಹತ್ತು ಲಕ್ಷ ರೂಪಾಯಿಗಳ ವೆಚ್ಚದ ಕಟ್ಟಡ ನಿರ್ಮಾಣ ಕಳೆದ ಷರ್ ಆರಂಭವಾಯಿತು. ಕಟ್ಟಡ ನಿರ್ಮಾಣ ಪ್ರದೇಶ, ಹಿಂದಿನ ಕಾರಣಂದವಾಡಿ ಸಂಸ್ಥಾನದವರು ಮರಾಠಿ ಶಾಲೆಯ ನಿರ್ಮಾಣಕ್ಕೆಂದೇ ನೀಡಲಾಗಿದೆಯೆಂದು ಕೆಲವು ಮರಾಠಿಗಳು ಆಕ್ಷೇಪಣೆ ಎತ್ತಿದರು. ಕನ್ನಡ ಶಾಲೆಯ ನಿರ್ಮಾಣದಿಂದ ಮರಾಠೀ ಶಾಲೆಗೆ ಆಟದ ಬಯಲಿನ ಸೌಲಭ್ಯ ಇಲ್ಲದಂತೆ ಆಗುವುದೆಂದೂ ಮರಾಠಿಗರು ಹೇಳುತ್ತಿದ್ದಾರೆ. ಇದರಿಂದ ಭಾಷಾ ಸೌಹಾರ್ದ ಕೆಟ್ಟು ಕಾನೂನು ಮತ್ತು ಶಿಸ್ತಿನ ತೊಂದರೆ ಉಂಟಾಗಬಹುದೆಂದು ಶಂಕಿಸಿದ ಅಧಿಕಾರಿಗಳು ಕಟ್ಟಡ ನಿರ್ಮಾಣವನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದರು. ಇಷ್ಟರಲ್ಲಿ ಮರಾಠಿ ಶಾಲೆಯ ಪರವಾದ ಕೆಲವು ವ್ಯಕ್ತಿಗಳು, ಕನ್ನಡ ಶಾಲೆಯ ನಿರ್ಮಾಣದ ಬಗ್ಗೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ.

(೩) ಸೂಕ್ತ ಪರ್ಯಾಯ ಪ್ರದೇಶ ಒದಗಿಸಲು ಬೆಳಗಾವಿ ಜಿಲ್ಲಾಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ಸ್ಥಳ ಒದಗಿಸಿದ ಕೂಡಲೇ ಕಟ್ಟಡ ನಿರ್ಮಾಣಕ್ಕೆ ಬೇಕಾದ ಹಣವನ್ನು ಒದಗಿಸುವುದಾಗಿ ನಿನ್ನೆ ಮೇಲ್ಮನೆಯಲ್ಲಿ ಆಶ್ವಾಸನೆ ನೀಡಲಾಗಿದೆ.

(೪) ಶಿಕ್ಷಣ ಖಾತೆಯ ಮಂತ್ರಿಗಳು ಬೆಳಗಾವಿಗೆ ಭೇಟಿ ನೀಡಲಿದ್ದಾರೆ. ಭಾಷಾ ರಾಜಕೀಯ ಶಿಕ್ಷಣ ಕ್ಷೇತ್ರಕ್ಕೆ ಬರಬಾರದು ಎಂಬುದೇ ಸರ್ಕಾರದ ಅಭಿಪ್ರಾಯ, ಈ ದಿಕ್ಕಿನಲ್ಲಿ ಬೇಕಾದ ಎಲ್ಲಾ ಕಾರ್ಯಗಳನ್ನೂ ಕೈಗೊಳ್ಳುವುದೇ ಈ ಭೇಟಿಯ ಉದ್ದೇಶ,

(೫) ಕನ್ನಡ ಶಾಲೆಗೆ ಬೇಕಾದ ಎಲ್ಲಾ ಸವಲತ್ತುಗಳನ್ನೂ ಒದಗಿಸಲಾಗುವುದು. ಭಾಷಾ ವಿಷಯದಲ್ಲಿ ಕನ್ನಡದ ವಿರುದ್ಧ ಯಾವುದೇ ಅನ್ಯಾಯ ಆಗದಂತೆಯೂ, ಯಾವುದೇ ಕನ್ನಡ ಇಲ್ಲವೇ, ಮರಾಠಿ ವಿದ್ಯಾರ್ಥಿಗೆ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳಲಾಗುವುದು.

ನಿನ್ನೆಯ ದಿವಸ ನಾನು ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಅಲ್ಲಿ ಕನ್ನಡ ಶಾಲೆಯನ್ನು ಕಟ್ಟುವುದಕ್ಕೆ ಕೆಲವೇ ದಿವಸಗಳಲ್ಲಿ ಪ್ರಯತ್ನ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

(VI) ಮಂಗಳೂರು ಆಳಿವೆಬಾಗಿಲಲ್ಲಿ ಹೂಳೆತ್ತುವ ಕಾರ್ಯವನ್ನು ಅತಿ ತುರ್ತಾಗಿ ಮಾಡುವ ಬಗ್ಗೆ

ಶ್ರೀ ಬಿ.ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳಗಾಲದಲ್ಲಿ ಮೀನುಗಾರರು ತಮ್ಮ ದೋಣಿಗಳನ್ನಿ ಮತ್ತು ಲಾಂಚಗಳನ್ನು ದಡಕ್ಕೆ ತಂದು ಇಟ್ಟಿರುವುದನ್ನು ಇದೀಗ ಸೆಪ್ಟೆಂಬರ್ ಒಂದರಿಂದು ನೀರಿಗೆ ಇಳಿಸಿ ತಮ್ಮ ಕಸುಬಿಗೆ ಸಿದ್ಧರಾಗುತ್ತಿದ್ದಾರೆ. ಆದರೆ ಅವರ ಉತ್ಸಾಹಕ್ಕೆ ಒಂದು ರೀತಿಯ ಭಯವೂ ಇದೆ. ಮಂಗಳೂರು ಆಳಿವೆ ಬಾಗಿಲಲ್ಲಿ ಹೂಳೆತ್ತುವ ಕಾರ್ಯವನ್ನು ಇನ್ನೂ ಮಾಡದೆ ಮೀನುಗಾರರಿಗೆ ತುಂಬಾ ತೊಂದರೆಯಾಗಿದೆ. ಅನೇಕರು ಜೀವ ಕಳೆದುಕೊಂಡು ತುಂಬಾ ನಷ್ಟಕ್ಕೊಳಗಾಗಿದ್ದಾರೆ. ಇಷ್ಟಾದರೂ ಇನ್ನೂ ಆಳಿವೆ ಬಾಗಿಲಲ್ಲಿ ಹೂಳೆತ್ತುವ ಕಾರ್ಯ ಪೂರ್ಣಗೊಳ್ಳಲಿಲ್ಲ. ಮೀನುಗಾರರ ದೋಣಿ-ಲಾಂಚ್‌ಗಳು ಪರಿಣಾಮ ಒದಗುವ ಭಯವಿದೆ. ಜೀವ ಹಾನಿಯಾಗುವ ಭಯವೂ ಇದೆ. ಆದಕಾರಣ ಕೂಡಲೇ ಮಂಗಳೂರು ಆಳಿವೆಬಾಗಿಲಲ್ಲಿ ಹೂಳೆತ್ತುವ ಕಾರ್ಯವನ್ನು ಅತೀ ತುರ್ತಾಗಿ ಮಾಡುವುದು ಅಗತ್ಯವಿದೆ. ಈ ವಿಷಯವನ್ನು ಮಾನ್ಯ ಮೀನುಗಾರಿಕಾ ಸಚಿವರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ಮೀನುಗಾರಿಕಾ ಮತ್ತು ಬಂದರುಗಳ ಸಚಿವರು),—ಮಾನ್ಯ ಅಧ್ಯಕ್ಷರೇ, ಅವರು ದಿಣ್ಣೆಯನ್ನು ತೆಗೆದು ಅಗತ್ಯವಾದ ಸಮುದ್ರದ ಆಳವನ್ನು ಉಂಟು ಮಾಡಿ ದೋಣಿಗಳು ಸುಲಭವಾಗಿ ಸಾಗಲು ಕಾರ್ಮಿಕರಿಗಳನ್ನು ತೆಗೆದುಕೊಳ್ಳಬೇಕೆಂದು ಮೊದಲಿನಿಂದಲೂ ಅಲ್ಲಿನ ಪ್ರಜೆಗಳಿಂದ ಒತ್ತಾಯವಿತ್ತು. ಈ ಬೇಡಿಕೆಗಳನ್ನು ಪರಿಶೀಲಿಸಲಾಗಿತ್ತು. ಆದರೆ ಅಗತ್ಯವಾದ ಸಮುದ್ರದ ಆಳವನ್ನು ಉಂಟು ಮಾಡಲು ಮೇಲಿನಿಂದ ಬರುವ ನೀರಿನ ರಭಸವನ್ನು ತಡೆಗಟ್ಟಲು ಇಕ್ಕೆಡೆಗಳಲ್ಲೂ ತಡೆಗೋಡೆಗಳನ್ನು ಕಟ್ಟಿದ ಹೊರತು, ಆ ಸ್ಥಳದಲ್ಲಿ ಉಂಟಾಗುವ ಮರಳು ದಿಣ್ಣೆಯನ್ನು ತೆಗೆದರೂ ಸಹ ಯಾವ ಪ್ರಯೋಜನವಾಗುವುದಿಲ್ಲ. ಈ ತಡೆಗೋಡೆಗಳನ್ನು ಕಟ್ಟಲು ಕೋಟ್ಯಾಂತರ ರೂಪಾಯಿಗಳು ಬೇಕಾಗುವುದಲ್ಲದೆ, ಇದನ್ನು ಕಟ್ಟಲು ದೀರ್ಘಕಾಲ ಬೇಕಾಗುತ್ತದೆ.

ನವೆಂಬರ್ ೧೯೮೩ರಲ್ಲಿ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯ ಮಾನ್ಯ ಮಂತ್ರಿಗಳು ಮತ್ತು ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆಯ ಕಾರ್ಯದರ್ಶಿ ಮತ್ತು ಉಪ ಕಾರ್ಯದರ್ಶಿ, ಇವರುಗಳು ಮಂಗಳೂರಿನ ಬೆಂಗರೆ ಸ್ಥಳಕ್ಕೆ ಭೇಟಿ ಕೊಟ್ಟು ಅಲ್ಲಿನ ಜನರ ಪ್ರತಿನಿಧಿಗಳೊಡನೆ ಮೇಲಿನ ವಿಷಯಗಳನ್ನು ಚರ್ಚಿಸಿದರು. ಆನಂತರ ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡಗಳು) ಬಂದರು ಇಲಾಖೆಯ ನಿರ್ದೇಶಕರು ಇವರಿಗೆ ತಾತ್ಕಾಲಿಕವಾಗಿ ಅಳಿವೆಯ ಬಳಿ ಹೂಳೆತ್ತುವ ಕಾರ್ಯವನ್ನು ಹಳೇ ಮಂಗಳೂರಿನ ಬಂದರಿನ ಓಲ್ಡ್ ಡ್ರೆಡ್ಜರನ್ನೇ ಉಪಯೋಗಿಸಿ ಈ ಕಾರ್ಯವನ್ನು ತೆಗೆದು ಕೊಳ್ಳುವುದೆಂದು ಆದೇಶ ಮಾಡಿದರು. ಕಾರಣ ಪೂರ್ಣ ಪ್ರಮಾಣದ ಕಾಮಗಾರಿಗಳಿಗೆ ೧೫ ಕೋಟಿ ರೂ. ಆಗಬಹುದೆಂದು ಅಂದಾಜು ಮಾಡಲಾಯಿತು. ಈ ಮಧ್ಯಂತರದಲ್ಲಿ ಹೂಳೆತ್ತುವ ಕಾರ್ಯವಲ್ಲದೆ ಸ್ಪರ್ಸ್‌ಗಳನ್ನು ನಿರ್ಮಾಣ ಮಾಡುವ ಕಾರ್ಯವನ್ನು ತೆಗೆದುಕೊಳ್ಳುವ ದೆಂದು ಆದೇಶ ಮಾಡಲಾಯಿತು.

ಹಳೇ ಮಂಗಳೂರು ಬಂದರಿನ ಅಳವೆಯಲ್ಲಿ ನೀರಿನ ಚಾಲನೆ ಸ್ಥಿರಗೊಳಿಸದೆ ಹೂಳೆತ್ತುವುದರಿಂದ ಯಾವ ದೀರ್ಘಕಾಲದ ಪರಿಣಾಮವೂ ಆಗುವುದಿಲ್ಲ. ಈ ಹೂಳೆತ್ತುವ ಕಾರ್ಯಕ್ಕೆ ೨೫-೯-೧೯೮೪ರಂದು ೬೫ ಲಕ್ಷ ರೂ. ಗಳ ವೆಚ್ಚದ ಅಂದಾಜಿನ ಮೇಲೆ ಹೂಳೆತ್ತುವ ಕೆಲಸಕ್ಕೆ ಟೆಂಡರುಗಳನ್ನು ಕರೆಯಲಾಯಿತು. ಎರಡು ಸಂಸ್ಥೆಗಳು ಟೆಂಡರ್ ದಾಖಲೆಗಳನ್ನು ಖರೀದಿಸಿ ಸಲದ ತನಿಖೆಯನ್ನು ಸಹಾ ಮಾಡಿದ್ದರೂ, ತಮ್ಮ ದರಪಟ್ಟಿಗಳನ್ನು ಒಪ್ಪಿಸಿರುವುದಿಲ್ಲ. ಆದ್ದರಿಂದ ಹೂಳೆತ್ತುವ ಕಾರ್ಯದ ಸಾಧ್ಯಸಾಧ್ಯತೆಗಳನ್ನು ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಸಂಸ್ಥೆಯೊಡನೆ ಪ್ರವಹರಿಸಿದ್ದು ಸದ್ರಿ ಪ್ರದೇಶದಲ್ಲಿ ಹೂಳೆತ್ತುವ ಕಾರ್ಯವನ್ನು ಪರಿಣಾಮಕಾರಿಯಾಗಿ ಮಾಡುವುದೇ ಪ್ರವಾಹ ನಿಯಂತ್ರಣ ಹಾಗೂ ಕಲ್ಲಿನ ದಂಡೆ (ಬ್ರೇಕ್ ವಾಟರ್) ಗಳನ್ನು ನಿರ್ಮಿಸುವುದು ಅಗತ್ಯವೆಂದು ಕಂಡು ಬಂದಿದೆ. ಈ ಕಾರ್ಯಗಳ ಬಗ್ಗೆ ಕರಡು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ. ೫.೭೦ ಕೋಟಿಯನ್ನು ಬಂದರು ಅಭಿವೃದ್ಧಿಗೆ ನಿಯೋಜಿಸಿರುತ್ತದೆ.

ಮಂಗಳೂರು ಹಳೇ ಬಂದರಿನಲ್ಲಿರುವ ಹೂಳೆತ್ತುವ ಯಂತ್ರದ ಸೇವೆಯನ್ನು ಗುರುಪುರ ನದಿಯಲ್ಲಿ ಹೂಳೆತ್ತುವ ಕಾರ್ಯಕ್ಕಾಗಿ ಸಾಧ್ಯವಿದ್ದಲ್ಲಿ ಬಳಸಲಾಗುತ್ತದೆ. ಇಲಾಖೆಯ ಮತ್ತೊಂದು ಹೂಳೆತ್ತುವ ಯಂತ್ರ ತುಂಬಾ ಹಳೆಯದಾಗಿದ್ದು ನಿರುಪಯುಕ್ತವಾಗಿರುವುದರಿಂದ ಈ ಯಂತ್ರವನ್ನು ಮಿಲೇವಾರಿ ಮಾಡಲು ಪ್ರಸ್ತಾಪಿಸಿದೆ.

ಸಣ್ಣ ನೀರಾವರಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು, ಮಂಗಳೂರು. ಇವರು ತಿಳಿಸಿರುವಂತೆ ಗುರುಪುರ ನದಿಗೆ ೫ ಸ್ಪರ್ಸ್ ನಿರ್ಮಾಣವು ನೇತ್ರಾವತಿ ನದಿಗೆ ೧ ಸ್ಪರ್ ನಿರ್ಮಾಣ ಮಾಡಲು ೬೯.೮೦ ಲಕ್ಷ ರೂ. ಗಳು ಬೇಕಾಗುತ್ತದೆ. ಸ್ಪರ್ಸ್‌ಗಳನ್ನು ಕಟ್ಟುವುದರಿಂದ ಮರಳು ದಿಣ್ಣೆಯ ನಿರ್ಮಾಣವನ್ನು ತಡೆ ಗಟ್ಟಬಹುದು ಅಂತ ಅನಿಸಿದೆ. ಇವುಗಳ ಬಗ್ಗೆ ಅಂದಾಜಂಗಳನ್ನು ಮತ್ತು ನಕ್ಷೆಗಳನ್ನು ತಯಾರಿಸಲಾಗಿದೆ. ಟೆಂಡರ್‌ಗಳನ್ನೂ ಸಹಾ ಕರೆಯಲಾಗಿದೆ. ೧೯೮೫-೮೬ನೇ ಸಾಲಿನಲ್ಲಿ ಈ ಕಾಮಗಾರಿಗೆ ೦೫.೦೦ ಲಕ್ಷ ರೂ. ಗಳನ್ನು ಒದಗಿಸಲಾಗಿದೆ. ಐದುಜನ ದರಗಳ ಟೆಂಡರನ್ನು ಸಣ್ಣ ನೀರಾವರಿಯ ಇಲಾಖಾ ಪತಿಯಿಂದ ಮಂಗಳೂರಿನ ಕಾರ್ಯ ನಿರ್ವಾಹಕ ಅಭಿಯಂತರರು ಕರೆದಿರುತ್ತಾರೆ. ಟೆಂಡರಿನ ಕೊನೆಯ ದಿನಪನ್ನು ೧೬-೧೦-೮೫ ಎಂದು ಪ್ರಕಟಿಸಲಾಗಿದೆ.

ಈ ಕಾಮಗಾರಿಗಳೆಲ್ಲಾ ಮುಗಿಯುವುದಕ್ಕೆ ಕೆಲವು ವರ್ಷಗಳು ಬೇಕಾಗುವುದರಿಂದ ಮತ್ತು ಇಂಲ್ಲಹ ಘಟನೆಗಳು ಮುಂದೆ ಸಂಭವಿಸದಂತಿರಲು ಈ ಮಿನುಗಾರರ ದೋಣಿಗಳನ್ನು ಹೊಸ ಬಂದರಿನ ಕಡೆಯಿಂದ ತಾತ್ಕಾಲಿಕವಾಗಿ ಓಡಾಡಿಸಲು, ಹೊಸ ಮಂಗಳೂರು ಬಂದರಿನ ಅಧಿಕಾರಿಗಳು ಅನುಮತಿಯನ್ನು ಕೊಡಬೇಕೆಂದು ಕೋರಲಾಗಿದೆ.

ಮಾನ್ಯ ಅಧ್ಯಕ್ಷರೇ, ಇಷ್ಟೇ ಅಲ್ಲದೆ. ನಾನೂ ಸಹ ನವಮಂಗಳೂರು ಬಂದರಿನ ಅಧ್ಯಕ್ಷರನ್ನು ಭೇಟಿ ಮಾಡಿ ಅಲ್ಲಿ ಏನಾದರು ತೊಂದರೆಯಾದರೆ ತಾತ್ಕಾಲಿಕವಾಗಿ ನವಮಂಗಳೂರು ಬಂದರಿನ ಕಡೆಯಿಂದ ಓಡಾಡಿಸಲು ಅವಕಾಶ ಒದಗಿಸಬೇಕೆಂದು ವಿನಂತಿ ಮಾಡಿಕೊಂಡಾಗ ಅವರು ಅದಕ್ಕೆ ಒಪ್ಪಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.